# ಶಾಲಾ ಕಾಲೇಜುಗಳಲ್ಲಿ ಮೂಲಶಿಕ್ಷಣಕ್ಕೆ ಆದ್ಯತೆ ಕಲ್ಪಿಸಿ

**ಆನೇಕಲ್** : ಪಟ್ಟಣಕ್ಕೆ ಸಮೀಪದ ಅಲಯನ್ಸ್ ವಿಶ್ವವಿದ್ಯಾಲಯದಲ್ಲಿ ಅಂತರರಾಷ್ಟ್ರೀಯ ಶಾಲಾಕಾಲೇ ಜುಗಳ ಮುಖ್ಯಸ್ಥರ ಶೃಂಗಸಭೆಯನ್ನು ಆಯೋಜಿಸಲಾಗಿತ್ತು. ಪರಿವರ್ತನೆಗಾಗಿ ಶಿಕ್ಷಣ ಎಂಬ ವಿಷಯದ ಬಗ್ಗೆ ಚರ್ಚೆ, ಸಂವಾದ, ವಿಚಾರಸಂಕಿರಣ ನಡೆಯಿತು. ವಿವಿಧ ಕಾಲೇಜುಗಳ ಮುಖ್ಯಸ್ಥರು ಶೃಂಗಸಭೆಯಲ್ಲಿ ಪಾಲ್ಗೊಂಡಿದ್ದರು. ಅಲಯನ್ಸ್ ವಿಶ್ವವಿದ್ಯಾಲಯದ ಸಹ ಕುಲಪತಿ ಅಭಯ್.ಜಿ.ಛೆಬ್ಬಿ ಮಾತನಾಡಿ ವಿದ್ಯಾರ್ಥಿ ಜೀವನದ ತಳಹದಿಯಲ್ಲಿ ಗುಣಾತ್ಮಕ ಶಿಕ್ಷಣ ನೀಡಿ ತಳಹದಿಯನ್ನು ಭದ್ರಪಡಿಸಬೇಕು. ಭದ್ರ ಬುನಾದಿಯು ಉನ್ನತ ಶಿಕ್ಷಣ ಪಡೆಯಲು ಸಾಧ್ಯವಾಗುತ್ತಿದೆ. ಈ ನಿಟ್ಟಿನಲ್ಲಿ ಶಾಲಾ ಕಾಲೇಜುಗಳಲ್ಲಿ ಮೂಲಶಿಕ್ಷಣಕ್ಕೆ ಆದ್ಯತೆ ಕಲ್ಪಿಸಬೇಕು ಎಂದರು. ಸೆಂಟರ್ ಫಾರ್ ಎಜುಕೇಷನ್ ಆಂಡ್ ಸೋಷಿಯಲ್ ಸ್ಟಡೀಸ್‌ನ ನಿರ್ದೇಶಕ ಪ್ರೊ.ಗೌರೀಶ ಜೋಷಿ ಮಾತನಾಡಿ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಮೌಲ್ಯ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಲಾಗಿದೆ. ಬೋಧನಾ ಚಟುವಟಿಕೆಗಳು ವಿದ್ಯಾರ್ಥಿಗಳಲ್ಲಿ ಒಳನೋಟವನ್ನು ಬೆಳೆಸುವಂತಾಗಬೇಕು. ಭಾರತೀಯ ಪರಂಪರೆ, ಸಂಸ್ಕೃತಿಯ ಬಗ್ಗೆ ಅರಿವು ಬೆಳೆಸುವಂತಾಗಬೇಕು. ಅಡಿಪಾಯದ ಮಟ್ಟದಲ್ಲಿ ವಿದ್ಯಾರ್ಥಿಗಳ ಕಲಿಕಾ ಸಾಮರ್ಥ್ಯವನ್ನು ಹೆಚ್ಚಿಸಲು ವಿವಿಧ ಭಾಷೆಗಳನ್ನು ಕಲಿಯಲು ಪ್ರೋತ್ಸಾಹಿಸಬೇಕು ಎಂದರು. ಅಲಯನ್ಸ್ ವಿಶ್ವವಿದ್ಯಾಲಯದ ಉಪಕುಲಪತಿ ಅನುಬಾ ಸಿಂಗ್ ಆಡಳಿತ ಮಂಡಳಿತ ಸುರೇಖಾ ಶೆಟ್ಟಿ, ಇಂದೋರ್ನ ಚೋಯಿತ್ರಮ್ ಸ್ಕೂಲ್ನ ಉತ್ತಮ್ಕುಮಾರ್, ಚೆನ್ನೈ ಪಬ್ಲಿಕ್ ಸ್ಕೂಲ್‌ನ ಚಿತ್ರಕಲಾ ರಾಮಚಂದ್ರನ್, ಪೋಡರ್ ಇಂಟರ್ನ್ಯಾಷನಲ್ ಕಾಲೇಜಿನ ಸುಚಿತಾ ಮಾಲಾಕರ್, ಅಲಯನ್ಸ್ ಕಾಲೇಜ್ ಆಫ್ ಲಿಬರಲ್ ಆರ್ಟ್‌ನ ಡಾ.ಜುಲೀನ್ ಪ್ಯಾರೆಟ್, ಶಾರ್ಜ ಇಂಡಿಯನ್ ಸ್ಕೂಲ್‌ನ ಡಾ.ಪ್ರಮೋದ್ ಮಹಾಜನ್, ಹೈದರಬಾದ್‌ನ ಪಾಣೀನಿಯ ವಿಶ್ವವಿದ್ಯಾಲಯದ ಡಾ.ದಂಡಿ ವಸುದಾ ರಾಣಿ ಇದ್ದರು.

